Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 299/2024

ಸಿ ಡಬ್ಲ್ಯೂ-2
ಪಿ ಡಬ್ಲ್ಯೂ-2

| | | |
|---|---|---|
| ಸಾಕ್ಷಿದಾರರ ಹೆಸರು | :- | ಮಂಜುನಾಥ |
| ತಂದೆಯ ಹೆಸರು | :- | ಪರಸಯ್ಯ |
| ವಯಸ್ಸು | :- | 35 ವರ್ಷ |
| ಉದ್ಯೋಗ | :- | ಚಾಲಕ |
| ವಾಸಸ್ಥಳ | :- | ಮಾವಿನಭಾವಿ |

ದಿ.19-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-1 ರವರ ಪರಿಚಯ ಇದೆ. ಚಾ.ಸಾ-3 ರವರ ಪರಿಚಯ ಇಲ್ಲ. ಸುಮಾರು 2 ವರ್ಷದ ಹಿಂದೆ ಪೋಲಿಸರು ದೇವರಭೂಪೂರ ಗ್ರಾಮದಲ್ಲಿ ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಅದನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-3(ಬಿ) ಎಂದು ಗುರುತಿಸಲಾಯಿತು. ನಮ್ಮ ಸಮಕ್ಷಮ ಘಟನಾ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ. ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-4 ಎಂದು ಗುರುತಿಸಲಾಗಿದೆ. ನಿ.ಪಿ-3 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಮಾನ್ಯ ಎಪಿಪಿ ಅವರಿಂದ**

ದಿನಾಂಕ 11-03-2023 ರಂದು ಪೋಲೀಸರು ನನ್ನನ್ನು ಮತ್ತು ಚಾಸಾ-3 ರವರನ್ನು ಪೋಲಿಸರು ಕರೆಯಿಸಿದ ಮೇರೆಗೆ ಚಾ.ಸಾ-1 ರವರು ತೋರಿಸಿದ ಸ್ಥಳದಲ್ಲಿ ಪೋಲಿಸರು ಬೆಳಿಗ್ಗೆ 10-00 ರಿಂದ 11-00 ವರೆಗೆ ನಿ.ಪಿ-3 ರಂತೆ ಪಂಚನಾಮೆ ಮಾಡಿ ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸರ ಹೇಳಿಕೆಯ ಮೇರೆಗೆ ನಿ.ಪಿ-4 ರ ಪೋಟೋದಲ್ಲಿ ನಿಂತಿರುತ್ತೇವೆ. ಅದನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ನನಗೆ ಗೊತ್ತಿಲ್ಲ. ನಿ.ಪಿ-3 ರಲ್ಲಿರುವ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ ಎಸ್.ಹೆಚ್. ಜಿ        ವಕೀಲರಿಂದಃ</u>**

ಏನೂ ಇಲ್ಲ.

<u>ಮರು ವಿಚಾರಣೆ ಃ</u>

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಇದೆ**

ಸಹಿ/-

ಪ್ರಧಾನ ಸಿವಿಲ. ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಲಿಂಗಸುಗೂರು.